# ಉಚ್ಚ ಪ್ರಾಥಮಿಕ ಶಿಷ್ಯವೃತ್ತಿ ಪರೀಕ್ಷೆ (UPS) 7 ನೇ ಇಯತ್ತೆ, ಎಪ್ರಿಲ್ 2026

**ಆಸನ ಕ್ರಮಾಂಕ–** | | | | | | | | | | | |

**0 8 1 1**

**ಪೇಪರ್ ಕ್ರ – I**

**ಮಾಧ್ಯಮ – ಕನ್ನಡ**

**ಸಂಚ– A**

**ಸಮಯ : 11:00 ರಿಂದ 12:30**

**ಪ್ರಥಮ ಭಾಷೆ ಮತ್ತು ಗಣಿತ**

**ಒಟ್ಟು ಗುಣಗಳು : 150**

**ಪುಟಗಳು : 32**

***ಪ್ರಶ್ನೆ ಪತ್ರಿಕೆ ಬಿಡಿಸುವುದಕ್ಕಿಂತ ಮುಂಚೆ ಕೆಳಗಿನ ಸೂಚನೆಗಳು ಎಚ್ಚರಿಕೆಯಿಂದ ಓದಿರಿ.***

(1) ಈ ಪ್ರಶ್ನೆ ಪತ್ರಿಕೆಯಲ್ಲಿ ಎರಡು ವಿಭಾಗಗಳಿವೆ. ವಿಭಾಗ **I** ರಲ್ಲಿ ತೃತೀಯ ಭಾಷೆಯ **1**ರಿಂದ **25** ಪ್ರಶ್ನೆಗಳಿವೆ ಮತ್ತು ವಿಭಾಗ **II** ರಲ್ಲಿ ಗಣಿತದ **26** ರಿಂದ **75** ಪ್ರಶ್ನೆಗಳಿವೆ. ಹೀಗೆ **75** ಪ್ರಶ್ನೆಗಳು ಇದ್ದು ಎಲ್ಲ ಪ್ರಶ್ನೆಗಳು ಬಿಡಿಸುವುದು ಅವಶ್ಯಕವಾಗಿದೆ.

(2) ಪ್ರತಿಯೊಂದು ಪ್ರಶ್ನೆಗೆ **2** ಗುಣಗಳಿವೆ.

(3) ಪ್ರಶ್ನೆ ಪತ್ರಿಕೆ ಬಿಡಿಸಲು ಒಟ್ಟು **90** ನಿಮಿಷಗಳ ಕಾಲಾವಧಿ ಕೊಡಲಾಗಿದೆ.

(4) ಉತ್ತರಗಳನ್ನು ನೊಂದಾಯಿಸುವ ಸಲುವಾಗಿ ಸ್ವತಂತ್ರ ಉತ್ತರ ಪತ್ರಿಕೆ ಕೊಡಲಾಗಿದೆ. ಪ್ರತಿಯೊಂದು ಪ್ರಶ್ನೆ ಕ್ರಮಾಂಕದ ಮುಂದೆ ನಾಲ್ಕು ಪರ್ಯಾಯವಿರುವ ವರ್ತುಳಗಳನ್ನು ಕೊಡಲಾಗಿದೆ. ಅದರಲ್ಲಿ ಯೋಗ್ಯ ಉತ್ತರವಿರುವ ಪರ್ಯಾಯ ಕ್ರಮಾಂಕದ ವರ್ತುಳವನ್ನು ಉದಾಹರಣೆಯಲ್ಲಿ ತೋರಿಸಿದಂತೆ ನೊಂದಾಯಿಸಿರಿ. ಉದಾ – ಪ್ರಶ್ನೆ ಕ್ರಮಾಂಕ 6ರ ಉತ್ತರ 2 ಆದರೆ ಕೆಳಗೆ ತೋರಿಸಿದಂತೆ ವೃತ್ತವನ್ನು ಪೂರ್ಣವಾಗಿ ತುಂಬಿರಿ.

ಉದಾ. ಪ್ರಶ್ನೆ ಕ್ರ. **6** – ① ● ③ ④

(5) ಕೆಳಗಿನಂತೆ ನೊಂದಾಯಿಸಿದ ಉತ್ತರಗಳ ಬಗ್ಗೆ ವಿಚಾರ ಮಾಡಲಾಗುವದಿಲ್ಲ.

① ② ⊙ ④

(6) ಒಂದು ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ವರ್ತುಳಗಳಲ್ಲಿ ನೊಂದಾಯಿಸಿದ ಉತ್ತರಗಳು, ತಿದ್ದುಪಡಿ ಮಾಡಿ ನೊಂದಾಯಿಸಿದ ಉತ್ತರಗಳು ಗಮನಕ್ಕೆ ತೆಗೆದುಕೊಳ್ಳಲಾಗುವುದಿಲ್ಲ.

(7) ಒಮ್ಮೆ ನೊಂದಾಯಿಸಿದ ಉತ್ತರ ಬದಲಾಯಿಸಲು ಬರುವುದಿಲ್ಲ.

(8) ಪರ್ಯಾಯದ ಉತ್ತರ ಕ್ರಮಾಂಕಗಳನ್ನು ಕೇವಲ ಕಪ್ಪು ಅಥವಾ ನೀಲಿ ಬಾಲ್ ಪೆನ್ನಿನಿಂದ ನೊಂದಾಯಿಸಬೇಕು. ಪೆನ್ಸಿಲಿನಿಂದ ನೊಂದಾಯಿಸಿದ ಉತ್ತರಗಳ ಬಗ್ಗೆ ವಿಚಾರ ಮಾಡಲಾಗುವುದಿಲ್ಲ.

(9) ಪ್ರಶ್ನೆ ಪತ್ರಿಕೆಯ ಪ್ರತಿಯೊಂದು ಪುಟದ ಕೆಳಗೆ ಮತ್ತು ಕೊನೆಯ ಪುಟದ ಮೇಲೆ ಕಚ್ಚಾ ಕೆಲಸಕ್ಕಾಗಿ ಖಾಲಿ ಸ್ಥಳವನ್ನು ಬಿಡಲಾಗಿದೆ ಅಲ್ಲಿಯೇ ಕಚ್ಚಾ ಕಾರ್ಯ ಮಾಡಬೇಕು.

(10) ಪರೀಕ್ಷೆಗೆ ಮರ್ಯಾದಿತ ವೇಳೆ ಇರುವುದರಿಂದ ಒಂದು ಪ್ರಶ್ನೆಯ ಉತ್ತರ ನಿಮಗೆ ಬರದಿದ್ದರೆ, ಮುಂದಿನ ಪ್ರಶ್ನೆ ಬಿಡಿಸಿರಿ. ಕೊನೆಗೆ ವೇಳೆ ಇದ್ದರೆ ಉಳಿದಂತ ಪ್ರಶ್ನೆಗಳ ಬಗ್ಗೆ ಪುನಃ ಪ್ರಯತ್ನ ಮಾಡಿರಿ.

(11) ಯಾವುದೇ ಪ್ರಶ್ನೆಯಲ್ಲಿ ತಪ್ಪು/ ದೋಷಗಳಿದ್ದರೆ ಅದರ ಬಗ್ಗೆ ಪರ್ಯವೇಕ್ಷಕ ಅಥವಾ ಪರೀಕ್ಷೆ ಕೇಂದ್ರ ಸಂಚಾಲಕರ ಕಡೆ ವಿಚಾರಣೆ ಮಾಡಬಾರದು.

(12) ಪ್ರಶ್ನೆಯಲ್ಲಿಯ ಯಾವುದೇ ದೋಷ/ತಪ್ಪು/ ಆಕ್ಷೇಪಣೆ ಬಗ್ಗೆ ನಿಮ್ಮ ಲಿಖಿತ ನಿವೇದನೆಯನ್ನು ಶಾಲೆಯವರು ಅಥವಾ ಪಾಲಕರು ಗಟಶಿಕ್ಷಣಾಧಿಕಾರಿ ಅಥವಾ ಶಿಕ್ಷಣಾಧಿಕಾರಿಯವರಿಗೆ ಕಳುಹಿಸಬಾರದು. ಆಯಾ ಶಾಲೆಯ ಲೌಗಿನ್‌ನಿಂದ ಆನ್‌ಲೈನ್ ನೊಂದಾಯಿಸಬೇಕು.

(13) ದೋಷ/ತಪ್ಪು/ಆಕ್ಷೇಪಣೆಗಳ ಬಗ್ಗೆ ನಿವೇದನೆಯನ್ನು ಆನ್‌ಲೈನ್ ಪದ್ಧತಿಯಿಂದ ಕಳಿಸುವ ಅವಧಿಯು ಪರೀಕ್ಷಾ ಪರಿಷದ ಸಂಕೇತಸ್ಥಳದ ಮೇಲೆ ಮಧ್ಯಂತರ (ತಾತ್ಕಾಲಿಕ) ಉತ್ತರ ಪತ್ರಿಕೆ ಪ್ರಕಟವಾದಾಗಿನಿಂದ **10** (ಹತ್ತು) ದಿನಗಳ ವರೆಗೆ ಇರುವದು.

(14) ಮುದ್ರಣ ದೋಷ ಅಥವಾ ಅನ್ಯ ಕಾರಣಗಳಿಂದ ಪ್ರಶ್ನೆ ತಪ್ಪು ಎಂದು ಕಂಡು ಬಂದರೆ ತಜ್ಞಸಮಿತಿಯ ಅಭಿಪ್ರಾಯಕ್ಕೆ ಅನುಸಾರವಾಗಿ ಅದನ್ನು ರದ್ದು ಮಾಡಲಾಗುವುದು.

(15) ಮೂಲ ಕನ್ನಡ ಮಾಧ್ಯಮದ ಜೊತೆಗೆ ಇಂಗ್ಲೀಷ್ ಭಾಷೆಯಲ್ಲಿ ಪ್ರಶ್ನೆ ಪತ್ರಿಕೆ ಕೊಡಲಾಗಿದೆ, ಮೂಲ ಕನ್ನಡ ಮಾಧ್ಯಮದಲ್ಲಿಯ ಸಂದಿಗ್ಧ ಪ್ರಶ್ನೆಯ ಬಗ್ಗೆ ಇಂಗ್ಲೀಷ್ ಪ್ರಶ್ನೆ ನೋಡಿರಿ.

# ವಿಭಾಗ - I

## ಕನ್ನಡ

01. 'ಬಹಳ ವರ್ಷ ಆಯುಷ್ಯ ಇರುವವ' ಈ ಶಬ್ದ ಸಮೂಹಕ್ಕಾಗಿ ಬರುವ ಶಬ್ದವನ್ನು ಪರ್ಯಾಯದಿಂದ ಆಯ್ಕೆ ಮಾಡಿರಿ.

(1) ಅಲ್ಪಾಯುಷಿ (2) ಶತಾಯುಷಿ
(3) ದೀರ್ಘಾಯುಷಿ (4) ಸ್ವಆಯುಷಿ

02. ಕೆಳಗಿನ ಪಡೆನುಡಿಯ ಅರ್ಥಕೊಡುವ ಪರ್ಯಾಯವನ್ನು ಗುರುತಿಸಿರಿ. 'ಆಟಹೂಡು'

(1) ಒಳ್ಳೆಯ ಉಪಾಯ ಮಾಡು (2) ಮೋಸದ ಉಪಾಯ ಮಾಡು
(3) ಆಟ ಆಡುವುದು (4) ಆಟ ಆಡಿಸುವುದು

03. ಕೆಳಗಿನ ಪರ್ಯಾಯಗಳಲ್ಲಿಯ ಸಮಾನಾರ್ಥಕವಿರದ ಜೋಡಿಯನ್ನು ಪರ್ಯಾಯದಿಂದ ಆಯ್ಕೆ ಮಾಡಿರಿ.

(1) ವಿಸ್ಮಯ = ಅಪಾರ
(2) ಉತ್ಕಟ = ಬಲವಾದ
(3) ಸುಂದರ = ಆಕರ್ಷಕ
(4) ಅನಿಲ = ಹವೆ

04. ಕೆಳಗಿನ ಪರ್ಯಾಯದಲ್ಲಿಯ ವಿರುದ್ಧಾರ್ಥಕ ಶಬ್ದದ ಸರಿಯಾದ ಜೋಡಿಯನ್ನು ಗುರುತಿಸಿರಿ.

(1) ಪರಿಚಿತ X ಚಿರಪರಿಚಿತ
(2) ನಿಕೇತನ X ಅನಿಕೇತನ
(3) ಶಕ್ತಿ X ಸುಶಕ್ತಿ
(4) ಧನಿಕ X ಶ್ರೀಮಂತ

05. ಕೆಳಗಿನ ಪರ್ಯಾಯದಲ್ಲಿಯ ಅಶುದ್ಧ ಶಬ್ದವನ್ನು ಗುರುತಿಸಿರಿ.

(1) ದಿಗ್ದರ್ಶಕ (2) ಕಾರ್ಯಾಲಯ
(3) ಬಾಧೆ (4) ಮೆಟ್ಟಿಲು

**SPACE FOR ROUGH WORK**

06. ಶಿವಶರಣರ ವಚನಗಳನ್ನು ಮೊದಲು ಶಾಸ್ತ್ರೀಯವಾಗಿ ಯಾರು ಸಂಪಾದಿಸಿದರು?

(1) ಬಸವಣ್ಣನವರು

(2) ಅಕ್ಕಮಹಾದೇವಿಯವರು

(3) ಫ.ಗು. ಹಳಕಟ್ಟಿಯವರು

(4) ಕುವೆಂಪು ಅವರು

07. ಕೆಳಗಿನ ಪರ್ಯಾಯದಲ್ಲಿ ಯಾವುದು ವಿಜಾತಿಯ ಸಂಯುಕ್ತಾಕ್ಷರ ಆಗಿಲ್ಲ ?

(1) ಸ್ತ್ರೀ

(2) ಸ್ವ

(3) ಸ್ಕೃ

(4) ಣ್ಣ

08. ಕೆಳಗಿನ ವಾಕ್ಯವು ಒಟ್ಟು ಎಷ್ಟು ವಿಭಕ್ತಿ ಪ್ರತ್ಯಯಗಳಿಂದ ಕೂಡಿದೆ ಎಂಬುದನ್ನು ಪರ್ಯಾಯದಿಂದ ಆಯ್ಕೆ ಮಾಡಿರಿ.

'ಶ್ರೀರಾಮನು ತಂದೆಯ ವಚನವನ್ನು ಪಾಲಿಸಲು ಅರಮನೆಯಿಂದ ಹೊರಟು ಅರಣ್ಯಕ್ಕೆ ಬಂದು ಗುಡಿಸಿಲಿನಲ್ಲಿ ವಾಸಮಾಡಿದನು'.

(1) 10

(2) 6

(3) 5

(4) 7

09. ಕೆಳಗಿನ ಪರ್ಯಾಯದಲ್ಲಿಯ ಗುಂಪಿಗೆ ಸರಿಹೊಂದದ ಲಿಂಗ ಪದವನ್ನು ಗುರುತಿಸಿರಿ.

(1) ಜಾಣ

(2) ದಡ್ಡ

(3) ಮಗು

(4) ಮಗ

**SPACE FOR ROUGH WORK**

10. ಕೆಳಗಿನ ಪರ್ಯಾಯದಲ್ಲಿರುವ ಗುಂಪಿಗೆ ಸರಿಹೊಂದದ ವಚನಗಳ ಜೋಡಿಯನ್ನು ಗುರುತಿಸಿರಿ.
(1) ಅಗಸ-ಅಗಸರು
(2) ಮುದುಕ-ಮುದುಕರು
(3) ಜನ-ಜನರು
(4) ಗಂಡಸು-ಗಂಡಸರು

11. ಕೆಳಗಿನ ಪರ್ಯಾಯದಲ್ಲಿರುವ ಸರಿಯಾಗಿರುವ ಸಮಾಸ ವಿಗ್ರಹವನ್ನು ಗುರುತಿಸಿರಿ.
(1) ದಶ+ಮುಖಗಳು
(2) ಕಿರಿ+ಕೊರಲು
(3) ಬಿಳಿ+ತಾವರೆ
(4) ಕೆಂಪಾದ+ಮಣ್ಣು

12. ''ಎಂಥ ಧೈರ್ಯ? ಸೈನಿಕರೆ, ಯುದ್ಧಕ್ಕೆ ಸಿದ್ಧರಾಗಿರಿ; ನನ್ನ ಕತ್ತಿಯೇ ಈ ಶ್ರೇಷ್ಠತೆಯ ಪರೀಕ್ಷೆ ಮಾಡಲಿ,'' ಎಂದು ಸಿಟ್ಟಿನಿಂದ ನುಡಿದನು.
ಈ ಮೇಲಿನ ವಾಕ್ಯದಲ್ಲಿ ಎಷ್ಟು ಪ್ರಕಾರದ ಲೇಖನ ಚಿಹ್ನೆಗಳನ್ನು ಉಪಯೋಗಿಸಲಾಗಿದೆ?
(1) 6
(2) 5
(3) 7
(4) 4

13. ಕೆಳಗಿನ ಪರ್ಯಾಯಗಳಲ್ಲಿಯ ಕರ್ಮಣಿ ಪ್ರಯೋಗವಿರುವ ವಾಕ್ಯವನ್ನು ಗುರುತಿಸಿರಿ ?
(1) ಮಗು ಯಾರಿಂದ ಬೈಯಲ್ಪಟ್ಟಿತು?
(2) ಮಗುವಿಗೆ ಯಾರು ಬೈದರು?
(3) ರಾಮನು ರಾವಣನನ್ನು ಕೊಂದನು.
(4) ರೈತರು ಗದ್ದೆಯನ್ನು ಊಳುತ್ತಾರೆ.

**SPACE FOR ROUGH WORK**

**ಪ್ರಶ್ನೆ. ಕ್ರ 14 ರಿಂದ 16 ರ ಸಲುವಾಗಿ ಸೂಚನೆ:- ಕೆಳಗಿನ ಕವಿತೆಯನ್ನು ಓದಿರಿ. ಅದರ ಕೆಳಗೆ ಕೇಳಲಾಗಿರುವ ಪ್ರಶ್ನೆಗಳ ಉತ್ತರಗಳನ್ನು ಪರ್ಯಾಯದಿಂದ ಆಯ್ಕೆ ಮಾಡಿರಿ.**

ನಲಿವುಕ್ಕಲಿ ಹಗೆಯಳಿಯಲಿ
ಮನ ನಿರ್ಮಲವಾಗಲಿ ।
ಕಹಿ ಕಳೆಯಲಿ ಸಿಹಿ ಬೆಳೆಯಲಿ
ಬಾಳು ಹಸನಾಗಲಿ ॥೧॥
ನಡೆ ಹಿತವಿರೆ ನುಡಿ ಮೆಲ್ಲಗೆ
ಶಾಂತಿ ಸಹನೆ ನೆಲೆಸಲಿ ।
ಕುಲಭೇದವ ಮರೆ ಮಾಚಲಿ
ನಮ್ಮ ಈ ನಾಡಲಿ ॥೨॥
ದುರ್ನಡತೆ ದುರ್ಬುದ್ಧಿಯ
ಕೊಳೆಯೆಲ್ಲವ ತೊಳೆಯಲಿ ।
ಒಲವುಕ್ಕಲಿ ಮದ ಮರೆಯಲಿ
ಕೋಮು ಗಲಭೆ ನಿಲ್ಲಲಿ ॥೩॥
ಇವ ನಮ್ಮವ ಇವ ನಮ್ಮವ
ಎನುವ ಭಾವ ಮೂಡಲಿ ।
ಕೀಳರಿಮೆಯ ಕಿತ್ತೆಸೆಯುತ
ಸಮಾನತೆಯು ಹರಡಲಿ ॥೪॥

**14.** ಬಾಳು ಹೇಗೆ ಹಸನಾಗಬೇಕೆಂದು ಕವಿಯು ಹೇಳಿದ್ದಾನೆ?
(1) ಸಿಹಿ ಕಳೆದು ಕಹಿ ಬೆಳೆದು
(2) ಕಹಿ ಕಳೆದು ಸಿಹಿ ಬೆಳೆದು
(3) ಸಿಹಿಕಹಿ ಕಳೆದು
(4) ಸಿಹಿಕಹಿ ಬೆಳೆದು

**15.** ಎಂತಹ ಕೊಳೆ ತೊಳೆಯಬೇಕು?
(1) ಮನದಲ್ಲಿರುವ
(2) ಪರಿಸರದಲ್ಲಿರುವ
(3) ಕುಲಭೇಧದ
(4) ದುರ್ನಡತೆಯ ದುರ್ಬುದ್ಧಿಯ

**16.** ನುಡಿಯು ಹೇಗಿರಬೇಕೆಂದು ಕವಿಯು ಹೇಳಿದ್ದಾನೆ?
(1) ಮೆಲ್ಲಗೆ
(2) ಮುತ್ತಿನಂತೆ
(3) ಸುಮಧುರ
(4) ಚೆನ್ನಾಗಿ

**SPACE FOR ROUGH WORK**

**ಪ್ರಶ್ನೆ 17 ರಿಂದ 19 ರ ಸಲುವಾಗಿ ಸೂಚನೆ :- ಕೆಳಗಿನ ಗದ್ಯಭಾಗವನ್ನು ಓದಿರಿ. ಅದರ ಕೆಳಗೆ ಕೇಳಲಾಗಿರುವ ಪ್ರಶ್ನೆಗಳ ಉತ್ತರಗಳನ್ನು ಪರ್ಯಾಯದಿಂದ ಆಯ್ಕೆ ಮಾಡಿರಿ.**

ಹಂಪೆ ಎಂಬ ಶಬ್ದ ಕಿವಿಗೆ ಬಿದ್ದಾಕ್ಷಣ ಕನ್ನಡಿಗನ ಮೈ ನವಿರೇಳುತ್ತದೆ. ಹಂಪೆಯ ಇತಿಹಾಸ ಮನವನ್ನು ಕದಡುತ್ತದೆ. ಇದು ಒಂದು ಕಾಲದಲ್ಲಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ವಿಜಯನಗರದ ಅರಸರು ತಮ್ಮ ಧೈರ್ಯ ಮತ್ತು ಸಾಹಸಗಳಿಂದ ರಾಜ್ಯವನ್ನು ವಿಸ್ತರಿಸಿ, ಎಲ್ಲ ಪ್ರಜೆಗಳ ಸುಖ ಸಮೃದ್ಧಿ ಶಾಂತಿಯ ಆಡಳಿತವನ್ನು ನೀಡಿದರು. ಹಂಪೆಯ ರಾಜಬೀದಿಗಳಲ್ಲಿ ಮುತ್ತು, ರತ್ನಗಳು ರಾಶಿ ಹಾಕಿ ಮಾರಲ್ಪಡುತ್ತಿದ್ದವು. ಅಂದಿನ ಆ ವೈಭವದ ಕಾಲ ಗತಿಸಿ ಹೋದರೂ ಸಹಿತ ಹಂಪೆ ಮಾತ್ರ ಗತ ಇತಿಹಾಸದ ಕುರುಹುಗಳನ್ನು ತನ್ನೊಡಲ್ಲಿಟ್ಟುಕೊಂಡು ಐತಿಹಾಸಿಕ ಮತ್ತು ಪ್ರೇಕ್ಷಣೀಯ ಸ್ಥಳವಾಗಿ ಇಂದಿಗೂ ಗರ್ವದಿಂದ ತಲೆ ಎತ್ತಿ ನಿಂತಿದೆ.

ಹಂಪೆಯು ಕರ್ನಾಟಕ ರಾಜ್ಯದ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿದೆ. ಹಂಪೆಯಲ್ಲಿ ಭವ್ಯವಾಗಿ ಎತ್ತರವಾಗಿ ಕಂಗೊಳಿಸುವುದೇ ವಿರೂಪಾಕ್ಷ ದೇವಾಲಯದ ಗೋಪುರ. ಈ ಗೋಪುರವು ಸುಮಾರು ೧೬೫ ಅಡಿ ಎತ್ತರವಿದ್ದು, ೧೧ ಅಂತಸ್ತುಗಳಿಂದ ಕೂಡಿದೆ. ಇದಕ್ಕೆ ಬಿಷ್ಟಪ್ಪಯ್ಯನ ಗೋಪುರವೆಂದೂ ಕರೆಯುವುದು ರೂಢಿಯಲ್ಲಿದೆ. ಈ ಗೋಪುರದ ಮುಂಭಾಗದಲ್ಲಿ ಸುಮಾರು ಅರ್ಧ ಮೈಲಿನಷ್ಟು ದೀರ್ಘವಾದ ವಿಶಾಲವಾದ ರಾಜಬೀದಿಯಿದೆ.

ವಿರೂಪಾಕ್ಷ ದೇವಾಲಯದ ಬಳಿ ಹೇಮಕೂಟ ಗುಡ್ಡವಿದೆ. ಇಲ್ಲಿ ಕೆಲವು ಅಂದವಾದ ಪ್ರಾಚೀನ ಬಸದಿಗಳಿವೆ.

**17.** ವಿರೂಪಾಕ್ಷ ದೇವಾಲಯದ ಗೋಪುರಕ್ಕೆ ಇರುವ ಇನ್ನೊಂದು ಹೆಸರೇನು?

(1) ವಿರೂಪಾಕ್ಷನ ಗೋಪುರ (2) ಭವ್ಯವಾದ ಗೋಪುರ

(3) ಹೇಮಕೂಟ (4) ಬಿಷ್ಟಪ್ಪಯ್ಯನ ಗೋಪುರ

**18.** ಹಂಪೆಯ ರಾಜಬೀದಿಗಳಲ್ಲಿ ಯಾವ ವ್ಯಾಪಾರ ನಡೆಯುತ್ತಿತ್ತು?

(1) ತರಕಾರಿಗಳ (2) ಮುತ್ತು ರತ್ನಗಳ

(3) ಧಾನ್ಯದ (4) ಕುದುರೆಗಳ

**19.** ವಿಜಯನಗರ ಸಾಮ್ರಾಜ್ಯದ ರಾಜಧಾನಿ ಯಾವುದಾಗಿತ್ತು?

(1) ಬಳ್ಳಾರಿ (2) ಹೊಸಪೇಟೆ

(3) ಹಂಪೆ (4) ಮೈಸೂರು

**SPACE FOR ROUGH WORK**

**20.** ಕೆಳಗಿನವುಗಳಲ್ಲಿಯ ಗುಂಪಿಗೆ ಸರಿಹೊಂದುವ ನಾಮಪದವನ್ನು ಪರ್ಯಾಯದಿಂದ ಆಯ್ಕೆ ಮಾಡಿರಿ.
ಜಾಣ, ಪಂಡಿತ, ಶಿಕ್ಷಕ, ವಿದ್ಯಾರ್ಥಿ

(1) ವಿಜ್ಞಾನಿ (2) ಜನರು
(3) ಗಣೇಶ (4) ಕೇಶವ

**21.** ಪಾಂಡವರ ಯಜ್ಞ ತುರಗ ಮಣಿಪುರವನ್ನು ಪ್ರವೇಶಿಸಿತು; ಆಗ ಬಭ್ರುವಾಹನನು ಅದನ್ನು ಕಟ್ಟಿ ಹಾಕಿದನು; ಆದ್ದರಿಂದ ಅರ್ಜುನ ಮತ್ತು ಬಭ್ರುವಾಹನನ ನಡುವೆ ಯುದ್ಧ ನಡೆಯಿತು.
ಈ ಮೇಲಿನ ವಾಕ್ಯವು ಯಾವ ಪ್ರಕಾರದ್ದಾಗಿದೆ?

(1) ಸರಳವಾಕ್ಯ (2) ಮಿಶ್ರವಾಕ್ಯ
(3) ಪ್ರಶ್ನಾರ್ಥಕವಾಕ್ಯ (4) ಸಂಯುಕ್ತವಾಕ್ಯ

**22.** ಕೆಳಗಿನ ಪರ್ಯಾಯದಲ್ಲಿಯ ಗುಂಪಿಗೆ ಸರಿಹೊಂದದ ಸಂಧಿ ಪದವನ್ನು ಗುರುತಿಸಿರಿ.

(1) ಲೋಕೈಕ (2) ವನೌಷಧ
(3) ಮಹೋದಕ (4) ಮಹೌಘ

**23.** ಕೆಳಗಿನ ವಾಕ್ಯದಲ್ಲಿ ಅಡಿಗೆರೆ ಎಳೆದಿರುವ ಕ್ರಿಯಾಪದದ ಕಾಲವನ್ನು ಗುರುತಿಸಿರಿ.
''ಶಿವರಾಮ ಕಾರಂತರು ಕಾದಂಬರಿಗಳನ್ನು <u>ಬರೆದಿರುವರು.</u>

(1) ವರ್ತಮಾನಕಾಲ (2) ಭೂತಕಾಲ
(3) ಭವಿಷ್ಯತ್‌ಕಾಲ (4) ಅಪೂರ್ಣ ವರ್ತಮಾನಕಾಲ

**24.** '..............................; ದೊಣ್ಣೆಗೆ ನಿಮಿಷ' ಈ ಗಾದೆಮಾತನ್ನು ಪೂರ್ಣಮಾಡಲು ಕೆಳಗೆ ಕೊಟ್ಟಿರುವ ಯೋಗ್ಯ ಪರ್ಯಾಯವನ್ನು ಆಯ್ಕೆ ಮಾಡಿರಿ.

(1) ಕಂಬಾರನಿಗೆ ವರುಷ (2) ಕುಂಬಾರನಿಗೆ ಹರುಷ
(3) ಕುಂಬಾರನಿಗೆ ವರುಷ (4) ಕುಂಬಾರನಿಗೆ ನಿಮಿಷ

**25.** ಕೋರ್ಟು,ಬ್ಯಾಂಕು, ಹಾರ್ಮೋನಿಯಂ, ಹೊಟೇಲು ಈ ಪದಗಳು ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿವೆ?


(1) ಹಿಂದಿ (2) ಉರ್ದು
(3) ಪೋರ್ತುಗೀಸ್ (4) ಇಂಗ್ಲಿಷ

**SPACE FOR ROUGH WORK**

## SECTION - II

## MATHEMATICS

**26.** In the given figure of regular hexagon, what is the addition of all its interior angles?



(1) $360^{\circ}$ (2) $540^{\circ}$
(3) $640^{\circ}$ (4) $720^{\circ}$

**27.** A rope of length 720 metres is cut at 8 places at equal distance. What is the length of each piece in decimetre?

(1) 720 decimetre (2) 80 decimetre
(3) 800 decimetre (4) 900 decimetre

**28.** $8\frac{1}{8}$ Km = ______________metre

(1) 812500 (2) 81250 (3) 812.5 (4) 8125

**29.** If the area of a square is 729 sq.cm. then what is its perimeter?

(1) 104 cm (2) 108 cm (3) 112 cm (4) 116 cm

**30.** The diameter of a circular garden is 700 metres. The garden is to be fenced with 5 rounds of wire. Find the total cost of fencing, if the rate of the wire is 60 ₹ per metre


(1) 660000 ₹ (2) 924000 ₹
(3) 880000 ₹ (4) 760000 ₹

**SPACE FOR ROUGH WORK**

## ವಿಭಾಗ - II

### ಗಣಿತ

**26.** ಕೆಳಗಿನ ಆಕೃತಿಯ ಮೇಲಿಂದ ಸುಸಮ ಷಟ್ಕೋನಿ ಬಹುಭುಜಾಕೃತಿಯ ಎಲ್ಲ ಅಂತರಕೋನಗಳ ಅಳತೆಗಳ ಒಟ್ಟು ಬೇರಿಜು ಎಷ್ಟು ?



(1) $360^\circ$ (2) $540^\circ$

(3) $640^\circ$ (4) $720^\circ$

**27.** 720 ಮೀಟರ ಉದ್ದಳತೆಯ ದಾರವನ್ನು ಸಮಾನ ಅಂತರದ ಮೇಲೆ 8 ಸ್ಥಳಗಳಲ್ಲಿ ಕತ್ತರಿಸಲಾಯಿತು ಹಾಗಾದರೆ ಪ್ರತಿಯೊಂದು ತುಂಡಿನ ಉದ್ದ ಡೆಸಿಮೀಟರನಲ್ಲಿ ಎಷ್ಟು ಬರುವುದು ?

(1) 720 (2) 80

(3) 800 (4) 900

**28.** $8\frac{1}{8}$ ಕಿಮೀ = ____________ ಮೀಟರ

(1) 812500 (2) 81250 (3) 812.5 (4) 8125

**29.** ಒಂದು ಚೌರಸದ ಕ್ಷೇತ್ರಫಲವು 729 ಚೌಸೆಮೀ. ಇದೆ. ಹಾಗಾದರೆ ಆ ಚೌರಸದ ಪರಿಮಿತಿ ಎಷ್ಟು ?

(1) 104 ಸೆಮೀ. (2) 108 ಸೆಮೀ. (3) 112 ಸೆಮೀ. (4) 116 ಸೆಮೀ.

**30.** ಒಂದು ವರ್ತುಳಾಕೃತಿ ಉದ್ಯಾನವನದ ವ್ಯಾಸ 700 ಮೀಟರ್ ಇದ್ದು ಆ ಉದ್ಯಾನವನದ ಸುತ್ತಲೂ 5 ಸುತ್ತಿನ ಮುಳ್ಳಿನ ತಂತಿಯ ಬೇಲಿಯನ್ನು ಹಾಕುವುದಿದೆ. ಒಂದು ವೇಳೆ ಮುಳ್ಳಿನ ತಂತಿಯ ಬೆಲೆ ಪ್ರತಿ ಮೀಟರ 60 ರೂಪಾಯಿ ಇದ್ದರೆ ಬೇಲಿಯನ್ನು ಹಾಕುವುದಕ್ಕಾಗಿ ಒಟ್ಟು ಎಷ್ಟು ಖರ್ಚು ಬರುವುದು ?

(1) 660000 ರೂ. (2) 924000 ರೂ.

(3) 880000 ರೂ. (4) 760000 ರೂ.

**SPACE FOR ROUGH WORK**

**31.** One square is formed with a 88 cm. long wire. One circle is formed with a 88 cm. long wire. What is the difference between the area of this square and this circle?

(1) 189 sq.cm. (2) 132 sq.cm.

(3) 188 sq.cm. (4) 197 sq.cm.

**32.** A rectangular garden with length 60 metre and breadth 40 metre has a road with breadth $3\frac{1}{2}$ metre on the outer side along the sides of the garden. What is the area of that road?

(1) 849 sq.m. (2) 729 sq.m.

(3) 649 sq.m. (4) 749 sq.m.

**33.** The surface area of a cube is 294 sq.cm. What is its volume?

(1) 343 c.c.

(2) 243 c.c.

(3) 512 c.c.

(4) 443 c.c.

**34.** The soil from the pit with length 250 metres, breadth 150 metres and depth 2 metres is spread evenly on the road with length 7.5 km. and 20 metres breadth. What will be the thickness of the soil spread on the road?

(1) 0.4 metre (2) 0.6 metre

(3) 0.5 metre (4) 1 metre

**35.** The scores 623, 616, 618, 620, 617, 619, 622, 621, $x$ are given. The average of all these scores is 620. What is the value of $x$ ?

(1) 615 (2) 614

(3) 626 (4) 624

**SPACE FOR ROUGH WORK**

**31.** 88 ಸೆಮೀ ಉದ್ದಳತೆಯ ಒಂದು ತಂತಿಯಿಂದ ಒಂದು ಚೌರಸ ತಯಾರಿಸಲಾಯಿತು ಮತ್ತು ಇನ್ನೊಂದು 88 ಸೆಮೀ ಉದ್ದಳತೆಯ ಒಂದು ತಂತಿಯಿಂದ ಒಂದು ವರ್ತುಳವನ್ನು ತಯಾರಿಸಿದಾಗ ವರ್ತುಳ ಹಾಗೂ ಚೌರಸದ ಕ್ಷೇತ್ರಫಲಗಳಲ್ಲಿರುವ ವ್ಯತ್ಯಾಸ ಎಷ್ಟು ಇರುವುದು ?

(1) 189 ಚೌಸೆಮೀ (2) 132 ಚೌಸೆಮೀ

(3) 188 ಚೌಸೆಮೀ (4) 197 ಚೌಸೆಮೀ

**32.** 60 ಮೀಟರ ಉದ್ದ ಹಾಗೂ 40 ಮೀಟರ ಅಗಲವಿರುವ ಆಯತಾಕೃತಿ ಉದ್ಯಾನವನದ ಹೊರಗಿನ ಬದಿಗೆ ಹೊಂದಿಕೊಂಡು $3\frac{1}{2}$ ಮೀಟರ ಅಗಲದ ರಸ್ತೆಯನ್ನು ತಯಾರಿಸಲಾಯಿತು. ಹಾಗಾದರೆ ರಸ್ತೆಯ ಕ್ಷೇತ್ರಫಲ ಎಷ್ಟು ಚೌಮೀ. ಇರುವುದು ?

(1) 849 ಚೌಮೀ. (2) 729 ಚೌಮೀ.

(3) 649 ಚೌಮೀ. (4) 749 ಚೌಮೀ.

**33.** ಒಂದು ಘನದ ಒಟ್ಟು ಪೃಷ್ಠಫಲ 294 ಚೌಸೆಮೀ ಇದ್ದರೆ ಆ ಘನದ ಘನಫಲವೆಷ್ಟು ?

(1) 343 ಘಸೆಮೀ.

(2) 243 ಘಸೆಮೀ.

(3) 512 ಘಸೆಮೀ.

(4) 443 ಘಸೆಮೀ.

**34.** 250 ಮೀಟರ ಉದ್ದ, 150 ಮೀಟರ ಅಗಲ, 2 ಮೀಟರ ಆಳವಿರುವ ತಗ್ಗಿನಲ್ಲಿಯ ಮಣ್ಣು 7.5 ಕಿಮಿ. ಉದ್ದ, 20 ಮೀಟರ ಅಗಲ ವಿರುವ ರಸ್ತೆಯ ಮೇಲೆ ಪಸರಿಸಿದಾಗ ಎಷ್ಟು ಮೀಟರ ದಪ್ಪವಿರುವ ಮಣ್ಣಿನ ಥರ ತಯಾರಾಗುವುದು ?

(1) 0.4 ಮೀಟರ್ (2) 0.6 ಮೀಟರ್

(3) 0.5 ಮೀಟರ್ (4) 1 ಮೀಟರ್


**35.** 623, 616, 618, 620, 617, 619, 622, 621, $x$, ಈ ಎಲ್ಲ ಪ್ರಾಪ್ತಾಂಕದ ಮಧ್ಯಮಾನ 620 ಇದೆ. ಹಾಗಾದರೆ $x$ದ ಬೆಲೆ ಎಷ್ಟು ?

(1) 615 (2) 614

(3) 626 (4) 624

**SPACE FOR ROUGH WORK**

**Instructions for the Question No. 36 and 37 :** This joint bar graph shows the information of fruit plants and flowering plants planted in the garden by students of 8$^{th}$, 9$^{th}$ and 10$^{th}$ standard of a school. Observe the bar graph and answer the questions given below.





**36.** Total how many fruit plants are planted by 8$^{th}$, 9$^{th}$ and 10$^{th}$ standard students?

(1) 255 (2) 245

(3) 225 (4) 215

**SPACE FOR ROUGH WORK**

**ಪ್ರಶ್ನೆ ಕ್ರ. 36 ರಿಂದ 37 ರ ಸಲುವಾಗಿ ಸೂಚನೆ:** ಆಲೇಖದ ಸಹಾಯದಿಂದ ಮುಂದಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ ಒಂದು ಶಾಲೆಯಲ್ಲಿಯ 8 ನೆಯ ಇಯತ್ತೆ, 9 ನೆಯ ಇಯತ್ತೆ, ಮತ್ತು 10 ನೆಯ ಇಯತ್ತೆಯಲ್ಲಿಯ ಎಲ್ಲ ವಿದ್ಯಾರ್ಥಿಗಳು ಉದ್ಯಾನದಲ್ಲಿ ನೆಡಲಾದ ಹೂವಿನಗಿಡ ಮತ್ತು ಹಣ್ಣಿನಗಿಡದ ಆಲೇಖವನ್ನು ಜೋಡಿಸ್ತಂಭದಿಂದ ತೋರಿಸಲಾಗಿದೆ. ಆದರಮೇಲಿಂದ ಪ್ರ.ಕ್ರ. 36 ರಿಂದ 37 ರ ವರೆಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.




**36.** 8 ನೆಯ ಇಯತ್ತೆ, 9 ನೆಯ ಇಯತ್ತೆ, 10 ನೆಯ ಇಯತ್ತೆಯಲ್ಲಿಯ ಎಲ್ಲ ವಿದ್ಯಾರ್ಥಿಗಳು ಎಷ್ಟು ಹಣ್ಣಿನಗಿಡಗಳನ್ನು ನೆಟ್ಟರು ?

(1) 255 (2) 245

(3) 225 (4) 215

**SPACE FOR ROUGH WORK**

**37.** What is the ratio of total flowering plants with the total fruit plants planted by all the students?

(1) 19:17 (2) 17:15

(3) 17:16 (4) 16:19

**38.** If 20% of $x$ = 10% of 8000 then what is the value of $x$?

(1) 4000 (2) 2000

(3) 3000 (4) 5000

**39.** The cost of sugar is increased by 25% and the sale of sugar is decreased by 10% The trade will show increase or decrease by how much percent?

(1) 15% increase

(2) 15% decrease

(3) 12.5% increase

(4) 12.5% decrease

**40.** Suresh took a loan of 10,000 at the rate of 12 p.c.p.a. and 12,000 at 9 p.c.p.a. respectively from a bank. If he repaid all the loan with interest after 3 years then find the total amount he paid?

(1) 6840 ₹

(2) 28840 ₹

(3) 27800 ₹

(4) 27880 ₹

**41.** What is the difference between the simple interest on ₹ 16,000 at the rate of $12\frac{1}{2}$ p.c.p.a. for $2\frac{1}{4}$ years and on ₹ 16,000 at the rate of 10 p.c.p.a. for $2\frac{1}{2}$ years?

(1) 500 ₹ (2) 400 ₹

(3) 550 ₹ (4) 450 ₹

**SPACE FOR ROUGH WORK**

**37.** ಎಲ್ಲ ವಿದ್ಯಾರ್ಥಿಗಳು ನೆಟ್ಟಿರುವ ಒಟ್ಟು ಹೂವಿನಗಿಡ ಮತ್ತು ಒಟ್ಟು ಹಣ್ಣಿನಗಿಡದ ಗುಣೋತ್ತರ ಎಷ್ಟು ?

(1) 19 : 17
(2) 17 : 15
(3) 17 : 16
(4) 16 : 19

**38.** $x$ ದ 20% = 8000 ದ 10% ಇದ್ದರೆ $x$ = ಎಷ್ಟು ?

(1) 4000
(2) 2000
(3) 3000
(4) 5000

**39.** ಸಕ್ಕರೆಯ ಬೆಲೆ ಶೆ. 25 ರಿಂದ ಹೆಚ್ಚಿಸಿದಾಗ ಸಕ್ಕರೆಯ ಮಾರಾಟ ಪ್ರಮಾಣ ಶೆ. 10 ರಿಂದ ಕಡಿಮೆ ಆಯಿತು. ಹಾಗಾದರೆ ಉತ್ಪನ್ನದಲ್ಲಿ ಶೇಕಡಾ ಹೆಚ್ಚು ಅಥವಾ ಶೇಕಡಾ ಕಡಿಮೆ ಎಷ್ಟಾಯಿತು ?

(1) 15% ಹೆಚ್ಚು
(2) 15% ಕಡಿಮೆ
(3) 12.5% ಹೆಚ್ಚು
(4) 12.5% ಕಡಿಮೆ

**40.** ಸುರೇಶನು ಎರಡು ಬ್ಯಾಂಕುಗಳಿಂದ ಅನುಕ್ರಮವಾಗಿ ಪ್ರ.ವ.ಪ್ರ.ಶೆ 12 ದರದಿಂದ 10000 ರೂ. ಮತ್ತು ಪ್ರ.ವ.ಪ್ರ.ಶೆ 9 ದರದಂತೆ 12000 ರೂಪಾಯಿಗಳ ಸಾಲವನ್ನು ತೆಗೆದುಕೊಂಡನು. ಅವನು ಆ ಎಲ್ಲ ಸಾಲವನ್ನು 3 ವರ್ಷಗಳನಂತರ ಬಡ್ಡಿಸಹಿತವಾಗಿ ಮರಳಿ ಕೊಟ್ಟನು. ಹಾಗಾದರೆ ಅವನು ಎರಡೂ ಬ್ಯಾಂಕುಗಳಲ್ಲಿ ಒಟ್ಟು ಎಷ್ಟು ರೂಪಾಯಿಗಳನ್ನು ತುಂಬಿದನು ?

(1) 6840 ರೂ.
(2) 28840 ರೂ.
(3) 27800 ರೂ.
(4) 27880 ರೂ.

**41.** ಪ್ರ.ವ.ಪ್ರ.ಶೆ $12\frac{1}{2}$ ದರದಿಂದ 16000 ರೂ. ಅಸಲಿನ $2\frac{1}{4}$ ವರ್ಷದ ಸರಳಬಡ್ಡಿ ಹಾಗೂ ಪ್ರ.ವ.ಪ್ರ.ಶೆ 10 ದರದಿಂದ 16000 ರೂ. ಅಸಲಿನ $2\frac{1}{2}$ ವರ್ಷದ ಆಗುವ ಸರಳ ಬಡ್ಡಿಗಳಲ್ಲಿಯ ವ್ಯತ್ಯಾಸ ಎಷ್ಟು?

(1) 500 ರೂ.
(2) 400 ರೂ.
(3) 550 ರೂ.
(4) 450 ರೂ.

**SPACE FOR ROUGH WORK**

**42.** If the item is sold for ₹ 60, the loss incurred is four times the profit gained by selling the same item at ₹ 80 then what is the cost price of that item?

(1) 62 ₹

(2) 58 ₹

(3) 56 ₹

(4) 64 ₹

**43.** When a shopkeeper sold the mobile at ₹ 39711 whose marked price was ₹ 42700 then how much % discount did he give?

(1) 9%

(2) 8%

(3) 7%

(4) 6%

**44.** Ramrao purchased a tractor at ₹ 650000 through a commission agent. If $1\frac{1}{2}\%$ of commission is paid to the agent then what is the total amount paid by Ramrao?

(1) 659750 ₹

(2) 658750 ₹

(3) 660750 ₹

(4) 661750 ₹

**45.** If $x = 37$ and $y = 27$ then $xy = ?$

(1) 949

(2) 999

(3) 989

(4) 1199

**SPACE FOR ROUGH WORK**

**42.** ಒಂದು ವಸ್ತು 60 ರೂಪಾಯಿಗೆ ಮಾರಿದಾಗ ಎಷ್ಟು ಹಾನಿ ಆಗುತ್ತದೆಯೋ ಅದರ ನಾಲ್ಕು ಪಟ್ಟು ಲಾಭ ಆ ವಸ್ತು 80 ರೂಪಾಯಿಗಳಿಗೆ ಮಾರಿದಾಗ ಆಗುತ್ತದೆ ಹಾಗಾದರೆ ಆ ವಸ್ತುವಿನ ಕೊಂಡ ಬೆಲೆ ಎಷ್ಟು ?

(1) 62 ರೂ.

(2) 58 ರೂ.

(3) 56 ರೂ.

(4) 64 ರೂ.

**43.** ಒಬ್ಬ ಅಂಗಡಿಕಾರನು 42700 ರೂಪಾಯಿ ಬೆಲೆಯ ಮೋಬಾಯಿಲ್ 39711 ರೂಪಾಯಿಗೆ ಮಾರಿದರೆ ಅಂಗಡಿಕಾರನು ಶೇಕಡಾ ಎಷ್ಟು ರಿಯಾಯತಿ ಕೊಟ್ಟನು ?

(1) 9%

(2) 8%

(3) 7%

(4) 6%

**44.** ರಾಮರಾವನು ಒಂದು ಟ್ರ್ಯಾಕ್ಟರ್‌ವನ್ನು ದಲ್ಲಾಳಿಗಳಮೂಲಕ 650000 ರೂಪಾಯಿಗಳಿಗೆ ಕೊಂಡನು. ದಲ್ಲಾಳಿಗೆ $1\frac{1}{2}\%$ ದಲಾಲಿ ಕೊಟ್ಟರೆ ಅವನಿಗೆ ಆ ಟ್ರ್ಯಾಕ್ಟರ್ ಎಷ್ಟು ರೂಪಾಯಿಗೆ ದೊರಕಿತು ?

(1) 659750 ರೂ.

(2) 658750 ರೂ.

(3) 660750 ರೂ.

(4) 661750 ರೂ.

**45.** ಒಂದು ವೇಳೆ $x$ = 37 ಹಾಗೂ y = 27 ಇದ್ದರೆ $x$y = ಎಷ್ಟು ?

(1) 949

(2) 999

(3) 989

(4) 1199

**SPACE FOR ROUGH WORK**

46. $(x + 7)(x - 7)$ are factors of which of the following algebraic expression?

(1) $x^2 - 16x - 63$

(2) $x^2 + 2x - 63$

(3) $x^2 - 14x - 63$

(4) $x^2 - 49$

47. $x^2 - 4xy + 4y^2 = ?$

(1) $(x-2y)(x-2y)$

(2) $(x+y)(x-4y)$

(3) $(x+2y)(x-2y)$

(4) $(x-y)(x-4y)$

48. Find the expansion of $(6x - 5y)^2$ from the following.

(1) $36x^2 - 30xy + 25y^2$

(2) $36x^2 + 30xy + 25y^2$

(3) $36x^2 - 60xy + 25y^2$

(4) $36x^2 - 120xy + 25y^2$

49. $(3x+4y)^2 + (3x-4y)^2 = ?$

(1) $32xy$

(2) $9x^2 + 16y^2$

(3) $9x^2 - 16y^2$

(4) $18x^2 + 32y^2$

**SPACE FOR ROUGH WORK**

46. $(x + 7)\ (x - 7)$ ಈ ಅವಯವಗಳು ಯಾವ ರಾಶಿಯದ್ದಾಗಿವೆ ?

(1) $x^2-16x-63$

(2) $x^2+2x-63$

(3) $x^2-14x-63$

(4) $x^2-49$

47. $x^2-4xy+4y^2$ = ಎಷ್ಟು ?

(1) $(x-2y)\ (x-2y)$

(2) $(x+y)\ (x-4y)$

(3) $(x+2y)\ (x-2y)$

(4) $(x-y)\ (x-4y)$

48. $(6x - 5y)^2$ ಈ ದ್ವಿಪದಿಯ ವರ್ಗವಿಸ್ತಾರ ಯಾವುದು ?

(1) $36x^2-30xy+25y^2$

(2) $36x^2+30xy+25y^2$

(3) $36x^2-60xy+25y^2$

(4) $36x^2-120xy+25y^2$

49. $(3x+4y)^2 + (3x-4y)^2$ = ಎಷ್ಟು ?

(1) $32xy$

(2) $9x^2 + 16y^2$

(3) $9x^2 - 16y^2$

(4) $18x^2 + 32y^2$

**SPACE FOR ROUGH WORK**

**50.** $9a^2 - \frac{1}{16}b^2 = ?$

(1) $\left(3a - \frac{1}{4}b\right)\left(3a - \frac{1}{4}b\right)$

(2) $\left(3a + \frac{1}{4}b\right)\left(3a - \frac{1}{4}b\right)$

(3) $(3a + 4b)(3a - 4b)$

(4) $\left(9a + \frac{1}{4}b\right)\left(9a - \frac{1}{4}b\right)$

**51.** If $\frac{4x + 10}{5} = 6$ then $x = ?$

(1) 2 (2) 10
(3) 4 (4) 5

**52.** If thrice a certain number is added to twice the same number then it comes to 85 then which is that number?

(1) 23 (2) 17
(3) 27 (4) 29

**53.** What is the addition of odd numbers from 1 to 100?

(1) 1600 (2) 1800
(3) 2401 (4) 2500

**54.** What is the difference between smallest natural number and greatest negative integer?

(1) 0 (2) 1
(3) 2 (4) 4

**SPACE FOR ROUGH WORK**

**50.** $9a^2 - \frac{1}{16}b^2$ = ಎಷ್ಟು ?

(1) $\left(3a - \frac{1}{4}b\right)\left(3a - \frac{1}{4}b\right)$

(2) $\left(3a + \frac{1}{4}b\right)\left(3a - \frac{1}{4}b\right)$

(3) $(3a + 4b)(3a - 4b)$

(4) $\left(9a + \frac{1}{4}b\right)\left(9a - \frac{1}{4}b\right)$

**51.** $\frac{4x + 10}{5} = 6$ ಹಾಗಾದರೆ $x$ = ಎಷ್ಟು ?

(1) 2 (2) 10

(3) 4 (4) 5

**52.** ಒಂದು ಸಂಖ್ಯೆಯ ಮೂರು ಪಟ್ಟಿನಲ್ಲಿ ಅದೇ ಸಂಖ್ಯೆಯ ಎರಡು ಪಟ್ಟು ಕೂಡಿಸಿದಾಗ 85 ಬರುತ್ತದೆ ಹಾಗಾದರೆ ಆ ಸಂಖ್ಯೆ ಯಾವುದು ?

(1) 23 (2) 17

(3) 27 (4) 29

**53.** 1 ರಿಂದ 100ರ ವರೆಗಿನ ಎಲ್ಲ ವಿಷಮ ಸಂಖ್ಯೆಗಳ ಬೇರೀಜು ಎಷ್ಟು?

(1) 1600 (2) 1800

(3) 2401 (4) 2500

**54.** ಎಲ್ಲಕ್ಕೂ ಚಿಕ್ಕ ನೈಸರ್ಗಿಕ ಸಂಖ್ಯೆ ಹಾಗೂ ಎಲ್ಲಕ್ಕೂ ದೊಡ್ಡ ಋಣ ಪೂರ್ಣಾಂಕ ಸಂಖ್ಯೆ ಇವುಗಳಲ್ಲಿಯ ವ್ಯತ್ಯಾಸವೆಷ್ಟು?

(1) 0 (2) 1

(3) 2 (4) 4


**SPACE FOR ROUGH WORK**

**55.** $\frac{73}{99} = ?$

(1) $0.\overline{73}$ (2) $0.\overline{731}$

(3) $0.7373$ (4) $0.73473$

**56.** Observe the number line and select which of the following option denotes co-ordinate of point P on the number line?




(1) $\frac{8}{3}$ (2) $\frac{7}{3}$

(3) $\frac{-10}{3}$ (4) $\frac{9}{3}$

**57.** The divisibility test of which of the following option is applicable for all the numbers 784, 98, 196, 392

(1) 2 and 7 (2) 2, 3 and 7

(3) 2, 3, 6 (4) 3, 4 and 7

**58.** Find the square root of

$\sqrt{1^3 + 2^3 + 3^3 + 4^3 + 5^3 + 6^3 + 7^3 + 8^3} =$

(1) 33 (2) 34

(3) 36 (4) 38

**59.** L.C.M. of two consecutive odd natural numbers is 2499. Which is the smaller number in those two numbers?

(1) 39 (2) 49

(3) 51 (4) 41


**SPACE FOR ROUGH WORK**

**55.** $\frac{73}{99}$ = ಎಷ್ಟು ?

(1) $0.\overline{73}$ (2) $0.\overline{731}$

(3) 0.7373 (4) 0.73473

**56.** ಸಂಖ್ಯಾರೇಷೆಯ ನಿರೀಕ್ಷಣೆ ಮಾಡಿರಿ. P ಬಿಂದು ಯಾವ ಸಂಖ್ಯೆಯನ್ನು ದರ್ಶಿಸುತ್ತದೆ? ಪರ್ಯಾಯವನ್ನು ಆಯ್ಕೆ ಮಾಡಿರಿ.




(1) $\frac{8}{3}$ (2) $\frac{7}{3}$

(3) $\frac{-10}{3}$ (4) $\frac{9}{3}$

**57.** 784, 98, 196, 392 ಈ ಎಲ್ಲ ಸಂಖ್ಯೆಗಳಿಗೆ ಕೆಳಗಿನ ಪರ್ಯಾಯಗಳಲ್ಲಿಯ ಯಾವ ಸಂಖ್ಯೆಗಳ ವಿಭಾಜ್ಯತೆಯ ಪರೀಕ್ಷೆ ಅನ್ವಯಿಸುತ್ತವೆ?

(1) 2 ಹಾಗೂ 7 (2) 2, 3 ಹಾಗೂ 7

(3) 2, 3 ಹಾಗೂ 6 (4) 3, 4 ಹಾಗೂ 7

**58.** ವರ್ಗಮೂಲ ತೆಗೆಯಿರಿ.

$\sqrt{1^3 + 2^3 + 3^3 + 4^3 + 5^3 + 6^3 + 7^3 + 8^3}$ = ಎಷ್ಟು ?

(1) 33 (2) 34

(3) 36 (4) 38

**59.** ಎರಡು ಕ್ರಮವಾಗಿರುವ ವಿಷಮ ನೈಸರ್ಗಿಕ ಸಂಖ್ಯೆಗಳ ಲ.ಸಾ.ವಿ 2499 ಇದ್ದರೆ ಆ ಎರಡು ಸಂಖ್ಯೆಗಳಲ್ಲಿಯ ಚಿಕ್ಕ ಸಂಖ್ಯೆ ಯಾವುದು ?

(1) 39 (2) 49

(3) 51 (4) 41

**SPACE FOR ROUGH WORK**

60. Which is the greatest Rational number from the given numbers.

$\frac{16}{27}, \frac{5}{9}, \frac{2}{3}, \frac{125}{243}$

(1) $\frac{125}{243}$ (2) $\frac{16}{27}$

(3) $\frac{5}{9}$ (4) $\frac{2}{3}$

61. $\frac{(2^5)^3}{2^7 \times 4^2} = ?$

(1) 8 (2) 12

(3) 16 (4) 32

62. Sunil and Anil invested ₹ 91,000 and ₹ 65000 respectively and started a business. At the end of the year they made a profit of ₹ 48300. How much is Sunil's share in profit?

(1) ₹ 29750 (2) ₹ 28175

(3) ₹ 28375 (4) ₹ 20175

63. 56 workers complete a work in 60 days. To complete the same work in 42 days, how many more workers are required?

(1) 80 (2) 48

(3) 36 (4) 24

64. Prakash completes one work in 10 days. Prasad completes the same work in 15 days. How many days will be required to complete the same work if both of them work together?

(1) 6 (2) 5

(3) 8 (4) 9

**SPACE FOR ROUGH WORK**

60. $\frac{16}{27}$, $\frac{5}{9}$, $\frac{2}{3}$, $\frac{125}{243}$ ಇವುಗಳಲ್ಲಿಯ ಎಲ್ಲಕ್ಕೂ ದೊಡ್ಡ ಪರಿಮೇಯ ಸಂಖ್ಯೆ ಯಾವುದು ?

(1) $\frac{125}{243}$ (2) $\frac{16}{27}$

(3) $\frac{5}{9}$ (4) $\frac{2}{3}$

61. $\frac{(2^5)^3}{2^7 \times 4^2}$ = ಎಷ್ಟು ?

(1) 8 (2) 12

(3) 16 (4) 32

62. ಸುನೀಲ ಹಾಗೂ ಅನೀಲ ಇವರು ಅನುಕ್ರಮವಾಗಿ ₹ 91000 ಮತ್ತು ₹ 65000 ಹೂಡಿಕೆ ಮಾಡಿ ಒಂದು ವ್ಯವಸಾಯವನ್ನು ಪ್ರಾರಂಭಿಸಿದರು. ವರ್ಷದ ಕೊನೆಗೆ ಅವರಿಗೆ ₹ 48300 ಲಾಭವಾದರೆ ಸುನೀಲನಿಗೆ ಎಷ್ಟು ರೂಪಾಯಿಗಳ ಲಾಭವಾಯಿತು ?

(1) ₹ 29750 (2) ₹ 28175

(3) ₹ 28375 (4) ₹ 20175

63. 56 ಕೂಲಿಕಾರರು ಒಂದು ಕೆಲಸವನ್ನು 60 ದಿವಸಗಳಲ್ಲಿ ಪೂರ್ಣಮಾಡುವರು ಅದೇ ಕೆಲಸ 42 ದಿವಸಗಳಲ್ಲಿ ಪೂರ್ಣ ಮಾಡುವುದಕ್ಕಾಗಿ ಇನ್ನೂ ಎಷ್ಟು ಕೂಲಿಕಾರರು ಬೇಕಾಗುವರು ?

(1) 80 (2) 48

(3) 36 (4) 24

64. ಪ್ರಕಾಶನು ಒಂದು ಕೆಲಸವನ್ನು 10 ದಿವಸಗಳಲ್ಲಿ ಪೂರ್ಣ ಮಾಡುತ್ತಾನೆ. ಪ್ರಸಾದನು ಅದೇ ಕೆಲಸವನ್ನು 15 ದಿವಸಗಳಲ್ಲಿ ಪೂರ್ಣ ಮಾಡುತ್ತಾನೆ. ಇಬ್ಬರೂ ಸೇರಿ ಆ ಕೆಲಸವನ್ನು ಎಷ್ಟು ದಿವಸಗಳಲ್ಲಿ ಪೂರ್ಣ ಮಾಡುವರು?

(1) 6 (2) 5

(3) 8 (4) 9

**SPACE FOR ROUGH WORK**

**65.** The sale of Vegetable seller for a week from Monday to Sunday is as follows:- ₹ 3025, ₹ 3075, ₹ 3250, ₹ 3300, ₹ 2400, ₹ 2250 and $x$.

If the average of the sale is ₹ 2800 then what is the value of ($x$), the sale on Sunday?

(1) 2000 ₹ (2) 2200 ₹


(3) 2300 ₹ (4) 2400 ₹

**66.** If m$\angle$P = $55^\circ$ then what is the measure of the supplementary angle of complementary angle of $\angle$P ?

(1) $35^\circ$ (2) $145^\circ$

(3) $135^\circ$ (4) $125^\circ$

**67.** In the adjoining figure out of $\angle$a, $\angle$b, $\angle$c, $\angle$d which angle is different?




(1) $\angle$a (2) $\angle$b

(3) $\angle$c (4) $\angle$d

**68.** Which of the following is a False statement?

(1) The angle bisectors of a triangle are not concurrent.

(2) The perpendicular bisectors of a triangle are concurrent.

(3) The sum of the measures of three angles of a triangle is $180^\circ$.

(4) In a triangle the sum of the length of the two smaller sides is greater than the length of the greatest side.

**SPACE FOR ROUGH WORK**

**65.** ಒಬ್ಬ ತರಕಾರಿ ಮಾರುವವನು ಸೋಮವಾರದಿಂದ ರವಿವಾರ ಹೀಗೆ ಒಂದು ವಾರದಲ್ಲಿ ಮಾರಿದ ತರಕಾರಿಯ ಹಣವನ್ನು ಮುಂದಿನಂತೆ ಕೊಡಲಾಗಿದೆ. 3025 ರೂ., 3075 ರೂ., 3250 ರೂ., 3300 ರೂ., 2400 ರೂ., 2250 ರೂ. ಮತ್ತು $x$ ರೂ.


ಒಂದು ವೇಳೆ ಸರಾಸರಿ ಮಾರಾಟವು 2800 ರೂಪಾಯಿಗಳು ಇದ್ದರೆ, ರವಿವಾರ ಮಾರಾಟ ಮಾಡಿದ $(x)$ ರೂ. ತರಕಾರಿಯ ಬೆಲೆ ಎಷ್ಟು ರೂಪಾಯಿ ಇರುವುದು ?

(1) 2000 ರೂ.
(2) 2200 ರೂ.
(3) 2300 ರೂ.
(4) 2400 ರೂ.

**66.** ಒಂದು ವೇಳೆ $\angle P = 55^\circ$ ಇದ್ದರೆ $\angle P$ ದ ಪರಿಪೂರಕಕೋನದ ಪೂರಕ ಕೋನದ ಅಳತೆ ಎಷ್ಟು ?

(1) $35^\circ$
(2) $145^\circ$
(3) $135^\circ$
(4) $125^\circ$

**67.** ಕೆಳಗಿನ ಆಕೃತಿಯಲ್ಲಿ $\angle a$, $\angle b$, $\angle c$, $\angle d$ ಇವುಗಳಲ್ಲಿ ಯಾವ ಕೋನವು ಭಿನ್ನವಾಗಿದೆ ಎಂಬುದನ್ನು ಪರ್ಯಾಯದಿಂದ ಆಯ್ಕೆ ಮಾಡಿರಿ.





(1) $\angle a$
(2) $\angle b$
(3) $\angle c$
(4) $\angle d$

**68.** ಕೆಳಗಿನ ವಿಧಾನಗಳಲ್ಲಿಯ ಅಸತ್ಯವಾದ ವಿಧಾನ ಯಾವುದು ?

(1) ತ್ರಿಕೋನದ ಕೋನದ್ವಿಭಾಜಕ ಏಕಸಂಪಾತ ಇರುವುದಿಲ್ಲ.
(2) ತ್ರಿಕೋನದ ಭುಜಗಳ ಲಂಬದ್ವಿಭಾಜಕ ಏಕಸಂಪಾತ ಇರುತ್ತದೆ.
(3) ತ್ರಿಕೋನದ ಮೂರು ಕೋನಗಳ ಅಳತೆಗಳ ಬೇರೀಜು $180^\circ$ ಇರುತ್ತದೆ.
(4) ತ್ರಿಕೋನ ತೆಗೆಯುವಾಗ ತ್ರಿಕೋನದ ದೊಡ್ಡ ಭುಜದ ಉದ್ದಳತೆಗಿಂತ ಉಳಿದ ಎರಡೂ ಭುಜಗಳ ಉದ್ದಳತೆಗಳ ಬೇರೀಜು ಹೆಚ್ಚು ಇರುತ್ತದೆ.

**SPACE FOR ROUGH WORK**

**69.** What is the perimeter of the $\triangle$ PQR ?




(1) 29 cm.

(2) 41 cm.

(3) 68 cm.

(4) 70 cm.

**70.** Select the option which is not the Pythagorean triplet?

(1) 42, 56, 70

(2) 15, 36, 40

(3) 10, 24, 26

(4) 11, 60, 61

**71.** The length of the rectangle is 30 cm. and breadth is 20 cm. What is the area of the square whose perimeter is same as the perimeter of the given rectangle?

(1) 625 sq.cm.


(2) 600 sq.cm.

(3) 576 sq.cm.

(4) 529 sq.cm.

**SPACE FOR ROUGH WORK**

**69.** ಕೆಳಗೆ ಕೊಟ್ಟಿರುವ $\triangle$ PQRದ ಪರಿಮಿತಿ ಎಷ್ಟು ?




(1) 29 ಸೆಮೀ.

(2) 41 ಸೆಮೀ.

(3) 68 ಸೆಮೀ.

(4) 70 ಸೆಮೀ.

**70.** ಕೆಳಗಿನ ಪರ್ಯಾಯಗಳಲ್ಲಿಯ ಪಾಯಥಾಗೋರಸನ ತ್ರಿಕೂಟ ಇಲ್ಲದಿರುವ ಪರ್ಯಾಯ ಯಾವುದು, ಅದನ್ನು ಆಯ್ಕೆ ಮಾಡಿರಿ.

(1) 42, 56, 70

(2) 15, 36, 40

(3) 10, 24, 26

(4) 11, 60, 61

**71.** 30 ಸೆಮೀ ಉದ್ದ ಹಾಗೂ 20 ಸೆಮೀ. ಅಗಲ ಇರುವ ಒಂದು ಆಯತದ ಪರಿಮಿತಿ ಎಷ್ಟು ಇದೆಯೋ, ಅಷ್ಟೇ ಪರಿಮಿತಿ ಇರುವ ಚೌರಸದ ಕ್ಷೇತ್ರಫಲ ಎಷ್ಟು ?

(1) 625 ಚೌಸೆಮೀ


(2) 600 ಚೌಸೆಮೀ

(3) 576 ಚೌಸೆಮೀ

(4) 529 ಚೌಸೆಮೀ

**SPACE FOR ROUGH WORK**

**72.** In the given figure, If the area of square PQRS is 900 sq.cm. then what is the area of square ABCD formed by joining the midpoints of sides of □PQRS ?




(1) 400 sq.cm. (2) 900 sq.cm.

(3) 450 sq.cm. (4) 600 sq.cm.

**73.** If a cuboid has 6 surfaces, 8 vertices then it has how many edges?

(1) 12 (2) 14


(3) 10 (4) 13

**74.** Select the odd term.

(1) Cube (2) Square

(3) Cuboid (4) Prism

**75.** Observe the figure, two parallel lines are intersected by a transversal find $\angle a = ?$





(1) $45^\circ$ (2) $50^\circ$

(3) $65^\circ$ (4) $55^\circ$

**SPACE FOR ROUGH WORK**

72. ಕೆಳಗಿನ ಆಕೃತಿಯಲ್ಲಿ ಚೌರಸ PQRSದ ಕ್ಷೇತ್ರಫಲ 900 ಚೌಸೆಮೀ. ಇದೆ. ಹಾಗಾದರೆ ಚೌರಸ PQRSದ ಭುಜಗಳ ಮಧ್ಯಬಿಂದುಗಳನ್ನು ಜೋಡಿಸಿ ತಯಾರಾಗುವ ಚೌರಸ ABCDಯ ಕ್ಷೇತ್ರಫಲ ಎಷ್ಟು ?





(1) 400 ಚೌಸೆಮೀ (2) 900 ಚೌಸೆಮೀ
(3) 450 ಚೌಸೆಮೀ (4) 600 ಚೌಸೆಮೀ

73. ಒಂದು ಚೌಕೋನಚಿತಿಗೆ 6 ಪೃಷ್ಠ, 8 ಶಿರೋಬಿಂದುಗಳಿವೆ ಹಾಗಾದರೆ ಅದರ ಅಂಚುಗಳ ಸಂಖ್ಯೆ ಎಷ್ಟು?
(1) 12 (2) 14
(3) 10 (4) 13

74. ಗುಂಪಿಗೆ ಸರಿಹೊಂದದ ಪರ್ಯಾಯವನ್ನು ಆಯ್ಕೆ ಮಾಡಿರಿ.
(1) ಘನ (2) ಚೌರಸ
(3) ಇಷ್ಟಿಕಾಚಿತಿ (4) ತ್ರಿಕೋನಚಿತಿ

75. ಕೆಳಗಿನ ಆಕೃತಿಯಲ್ಲಿ ಎರಡು ಸಮಾಂತರ ರೇಷೆಗಳನ್ನು ಒಂದೇ ರೇಷೆಯಿಂದ ಛೇದಿಸಲಾಗಿದೆ ಅದರ ಮೇಲಿಂದ $\angle a$ = ಎಷ್ಟು ?




(1) $45^\circ$ (2) $50^\circ$
(3) $65^\circ$ (4) $55^\circ$

**SPACE FOR ROUGH WORK**

**ಕೇವಲ ಕಚ್ಚಾ ಕೆಲಸಕ್ಕಾಗಿ**